ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ಪುಟದ ಸಂಖ್ಯೆ – 14 –

ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

1.	ಕಾಮಗಾರಿ ಹೆಸರು:	Maintenance of Road and Footpath in J P Park in ward no 17
2.	ಜಾಬ್ ಸಂಖ್ಯೆ:	017-20-000028
3.	ಅಂದಾಜು ಮೊತ್ತ:	15.00 ಲಕ್ಷಗಳು
4.	ಆಡಳಿತಾತ್ಮಕ ಅನುಮೋದನೆ ಸಂಖ್ಯೆ	ಕಾ.ಪಾ.ಅ/ರಾರಾನವಿ/ಆ.ಮಂ./60/2020-21 ದಿ; 27.05.2020
5.	ತಾಂತ್ರಿಕ ಅನುಮೋದನೆ ಸಂಖ್ಯೆ	ಕಾ.ಪಾ.ಅ/ರಾರಾನವಿ/ತಾ.ಮಂ./60/2020-21 ದಿ; 27.05.2020
6.	ಟೆಂಡರ್ ನೋ.ಸಂ.	EE/RRND/Tend/20/2020-21 Date: 29.03.2021
7.	ಇ-ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ	BBMP/2020-21/RD/WORK_INDENT42851/CALL-2

****

(40)

ಕಾರ್ಯಪಾಲಕ ಅಭಯಂತರರು, ರಾಜರಾಜೇಶ್ವರಿ ನಗರ ವಿಭಾಗದ ವ್ಯಾಪ್ತಿಯ ಯಶವಂತಪುರ ಉಪವಿಭಾಗದ ವಾರ್ಡ್ 17 ರಲ್ಲಿ 2019-20ನೇ ಸಾಲಿನ 14ನೇ ಹಣಕಾಸು ಯೋಜನೆ ಲೆಕ್ಕಶೀರ್ಷಿಕೆ ಪಿ-3296 ಅನುದಾನದಡಿಯಲ್ಲಿ ರಸ್ತೆ ಮತ್ತು ಫುಟ್‌ಪಾತ್ ನಿರ್ವಹಣೆ ಕಾಮಗಾರಿಯಾದ Maintenance of Road and Footpath in J P Park in ward no 17 ರೂ. 15.00 ಲಕ್ಷಗಳಿಗೆ ಜಾಬ್‌ಸಂಖ್ಯೆಯನ್ನು ನೀಡಲಾಗಿರುತ್ತದೆ. ಈ ಕಾಮಗಾರಿಗೆ ಏಕ ಲಕೋಟೆ ಮುಖಾಂತರ ಅರ್ಹ ಗುತ್ತಿಗೆದಾರರಿಂದ e-Procurement ಮುಖೇನಾ ಕಛೇರಿ ಅಧಿಸೂಚನೆ ಸಂಖ್ಯೆ: EE/RRND/Tend/20/2020-21 Date: 29.03.2021 ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್ ಪ್ರಕಟಣೆಯನ್ನು ದಿನಾಂಕ: 30.03.2021 ರ ಕನ್ನಡ ದಿನಪತ್ರಿಕೆ ಉದಯವಾಣಿ ಹಾಗೂ Times of India ಆಂಗ್ಲ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡಿರುತ್ತದೆ. ಟೆಂಡರ್ ಅಧಿಸೂಚನೆಯ ವಿವರಗಳು ಈ ಕೆಳಕಂಡಂತಿರುತ್ತದೆ.

(41)

- **The Bid Documents can be downloaded from e – Procurement Website https://eproc.karnataka.gov.in from 08.04.2021 onwards under login for Contractors.**
- **Last Date for uploading the Filled Tender Document: 27.04.2021 upto 16.00 hrs.**
- **Date of Opening of Financial Bid: 29.04.2021 at 16.00 hrs.**

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆರ್ಥಿಕ ಬಿಡ್‌ನ್ನು ದಿನಾಂಕ; 03.05.2021 ರಂದು ತೆರೆಯಲಾಗಿದ್ದು, ಈ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

1. SHARATH CHANDRA HARSHITH (EMINENCE VENTURES)
2. S SANTHOSH KUMAR
3. NAVEEN BOPPANNA

ಮೇಲ್ಕಂಡ ಮೂರು ಗುತ್ತಿಗೆದಾರರಲ್ಲಿ SHARATH CHANDRA HARSHITH (EMINENCE VENTURES) ರವರು ಸಿವಿಲ್ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸದೇ ಇರುವುದರಿಂದ ತಾಂತ್ರಿಕವಾಗಿ ಅನರ್ಹರಾಗಿರುತ್ತಾರೆ. ಅರ್ಹರಾಗಿರುವ ಗುತ್ತಿಗೆದಾರರ ಆರ್ಥಿಕ ಬಿಡ್ಡಿನ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಗುತ್ತಿಗೆದಾರರ ವಿವರ	ಟೆಂಡರ್‌ಗಿಟ್ಟ ಮೊತ್ತ	ಗುತ್ತಿಗೆದಾರರು ನಮೂದಿಸಿರುವ ಮೊತ್ತ	2018-19ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ	ಷರಾ
1	ಶ್ರೀ ಎಸ್. ಸಂತೋಷ್ ಕುಮಾರ್	ರೂ. 12,60,800.29	ರೂ. 13,36,491.20	+6.00%	L1
2	ಶ್ರೀ ನವೀನ್ ಬೊಪ್ಪಣ್ಣ		ರೂ. 13,73,983.36	+8.98%	L2

ಸದರಿ ಕಾಮಗಾರಿಗೆ ಮಂಜೂರಾದ ಅಂದಾಜನ್ನು ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ದರಸೂಚಿ 2018-19 ರಂತೆ ತಯಾರಿಸಲಾಗಿದ್ದು, ಸದರಿ ದರಗಳ ಪ್ರಕಾರ ಟೆಂಡರ್‌ಗಿಟ್ಟ ಮೊತ್ತ ರೂ. 12,60,800.29 ಗಳಾಗಿರುತ್ತದೆ. ಅತಿ ಕಡಿಮೆ ಬಿಡ್ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ ಎಸ್. ಸಂತೋಷ್ ಕುಮಾರ್ ರವರು ನಮೂದಿಸಿರುವ ದರ ರೂ. 13,36,491.20 ಆಗಿದ್ದು, ಸದರಿ ಮೊತ್ತವನ್ನು ಬೆಂಗಳೂರು ವೃತ್ತದ ದರಸೂಚಿ 2018-19 ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇ. +6.00% ರಷ್ಟು ಹೆಚ್ಚುವರಿಯಾಗಿರುತ್ತದೆ.

ಸದರಿಯವರನ್ನು ದರಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರಾದ ಶ್ರೀ ಎಸ್. ಸಂತೋಷ್ ಕುಮಾರ್ ರವರು ಶೇ. +4.77% ಹೆಚ್ಚುವರಿ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಅತಿ ಕಡಿಮೆ ಬಿಡ್ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ ಎಸ್. ಸಂತೋಷ್ ಕುಮಾರ್ ರವರು ನಮೂದಿಸಿರುವ ದರ ಮೊತ್ತ ರೂ. 13,20,995.00 ಗಳಿಗೆ (2018-19ನೇ ಸಾಲಿನ ಚಾಲ್ತಿ ದರಗಳಿಗೆ ಶೇ. +4.77% ರಷ್ಟು ಹೆಚ್ಚುವರಿ) ಟೆಂಡರ್ ಅನುಮೋದನೆ ಕೋರಿ ಕಡತವನ್ನು ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ರಾಜರಾಜೇಶ್ವರಿನಗರ ವಿಭಾಗ.

ಮುಖ್ಯ ಅಭಿಯಂತರರು(ರಾರಾನವ)

ಮುಖ್ಯ ಅಭಿಯಂತರರು ರಾ.ರಾ.ನ.ವ.
ಆಪ್ತ ಕಾವೆ ಸಂಖ್ಯೆ: 279
ದಿನಾಂಕ: 26/7/21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಅನುಮೋದನೆ ಕುರಿತು ಸ್ಪಷ್ಟೀಕರಣ ಪುಟದ ಸಂಖ್ಯೆ –14–

ಸಲ್ಲಿಸುವ ಬಗ್ಗೆ. ಕಡತದ ಸಂಖ್ಯೆ CE|RRN|PKL|279|20-22

ಟಿಪ್ಪಣಿಗಳು ಮತ್ತು ಆಜ್ಞೆಗಳು

ಪ್ರಸ್ತಾಪಿತ ವಿಷಯವು ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿರುವ ಕುರಿತು.

ಕಂಡಿಕೆ (35) ರಿಂದ (43) ರವರೆಗಿನ ಕಾ.ಪಾ.ಅ(ರಾರಾನಗರ) ವಿಭಾಗ ರವರು ಸಲ್ಲಿಸಿರುವ ಟೆಂಡರ್ ಪ್ರಸ್ತಾವನೆಯನ್ನು ತಮ್ಮ ಅವಗಾಹನೆಗಾಗಿ ತರುತ್ತಾ, 2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಲೆಕ್ಕಶೀರ್ಷಿಕೆ P-3296ರ ಅನುದಾನಡಿ ಅನುನೋದನೆಗೊಂಡಿರುವ ಕಾಮಗಾರಿಯಾದ **"Maintenance of Roads and footpath in J P Park in ward No.17"(017-20-000028)** ರ ಕಾಮಗಾರಿಯ ಅಂದಾಜು ಮೊತ್ತ ರೂ.15.00 ಲಕ್ಷಗಳ ಕಾಮಗಾರಿಗೆ ದಿನಾಂಕ:29.03.2021 ರಂದು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನ ಬಿಡ್‌ನ್ನು ದಿನಾಂಕ:03.05.2021 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಗುತ್ತಿಗೆದಾರರಾದ **(1)Sri.Sharathchandra Harshith (Eminence Ventures) (2)Sri.S Santhosh Kumar (3)Sri. Naveen Bhoppanna** ರವರು ಭಾಗವಹಿಸಿದ್ದು, ಕ್ರ.ಸಂ.01ರ ಗುತ್ತಿಗೆದಾರರು ಸಿವಿಲ್ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸದೇ ಇರುವ ಕಾರಣ ಸದರಿ ರವರು ತಾಂತ್ರಿಕವಾಗಿ ಅನರ್ಹರಾಗಿರುತ್ತಾರೆಂದು ವರದಿಸುತ್ತಾ ಕ್ರ.ಸಂ. 02ರ ಎಲ್–2 ಗುತ್ತಿಗೆದಾರರಾದ S Santhosh Kumar ರವರು ನಮೂದಿಸಿರುವ ಮೊತ್ತಕ್ಕೆ ಅನುಮೋದನೆ ಕೋರಿರುತ್ತಾರೆ.

ಮುಂದುವರೆದು, ಮುಖ್ಯ ಅಭಿಯಂತರರೊಡನೆ ಚರ್ಚಿಸಲಾಗಿ ಹಾಗೂ ಕಡತ ಪರಿಶೀಲಿಸಲಾಗಿ ಸದರಿ ಟೆಂಡರ್‌ನಲ್ಲಿ ಎಲ್–1 ಗುತ್ತಿಗೆದಾರರಿಗೆ ಟೆಂಡರ್ ನಿಯಮಾವಳಿಯಂತೆ ಅನರ್ಹಗೊಳಿಸಿರುವುದು ಸರಿಯಷ್ಟೆ. ಸದರಿ ಕಾಮಗಾರಿಯ ಅವಶ್ಯಕತೆ ಕುರಿತು ಹಾಗೂ ಎಲ್–2 ರವರಿಗೆ ಶಿಫಾರ್ಸು ಮಾಡಿರುವುದರ ಬಗ್ಗೆ ಸ್ಪಷ್ಟೀಕರಣ ನೀಡಲು ಕಡತವನ್ನು ಕಾ.ಪಾ.ಅ(ರಾರಾನಗರ) ರವರಿಗೆ ಹಿಂದಿರುಗಿಸಲು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಮು.ಅ(ರಾರಾನವ)

If Works are to be done, the item of Requirement & Work done Must Clarify in Remark

ಮುಖ್ಯ ಅಧಿಕಾರಿಗಳು
ರಾಜರಾಜೇಶ್ವರಿ ನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾ...

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ —16—

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

EE Rajajinagar PR No 307/21/22
30/8/21

50) ಕಂಡಿಕೆ (47) ರಿಂದ (49) ರಲ್ಲಿ ಮುಖ್ಯ ಅಭಿಯಂತರರು, ರಾರಾನಗರ ವಲಯ ರವರು, ಸದರಿ ಕಾಮಗಾರಿಯ ಅವಶ್ಯಕತೆ ಕುರಿತು ಹಾಗೂ ಎಲ್-2 ರವರಿಗೆ ಶಿಫಾರಸ್ಸು ಮಾಡಿರುವುದರ ಬಗ್ಗೆ ಸ್ಪಷ್ಟೀಕರಣ ನೀಡಲು ಆದೇಶಿಸಿರುತ್ತಾರೆ. ಅದರಂತೆ ಸದರಿ ಕಾಮಗಾರಿಯು 2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಲೆಕ್ಕಶೀರ್ಷಿಕೆ ಪಿ-3296 ರ ಅನುದಾನದಡಿ ಅನುಮೋದನೆಗೊಂಡಿರುವ ಕಾಮಗಾರಿಯಾದ Maintenance of Roads and Footpath in JP Park in ward no 17 (017-20-000028) ರ ಕಾಮಗಾರಿಯ ಅಂದಾಜುಮೊತ್ತ ರೂ. 15.00 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಯು ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ರಸ್ತೆ ಕಾಮಗಾರಿಯಾಗಿದ್ದು, ದಿನನಿತ್ಯ ದಟ್ಟವಾದ ವಾಹನ ಸಂಚಾರದಿಂದ ಕೂಡಿರುತ್ತದೆ. ಹಾಗಾಗಿ ಸದರಿ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು ಅವಶ್ಯಕವಾಗಿರುತ್ತದೆ.

51) ಮೇಲ್ಕಂಡ ಕಾಮಗಾರಿಯು ರಸ್ತೆ ಅಭಿವೃದ್ಧಿ ಕಾಮಗಾರಿಯಾಗಿರುವುದರಿಂದ ಎಲ್-1 ಗುತ್ತಿಗೆದಾರರು ಈ ಕಾಮಗಾರಿಯ ಸಾಮಾನ್ಯ ಸ್ವಭಾವದ ದೃಢೀಕರಣ ಪತ್ರವನ್ನು ಲಗತ್ತಿಸಿರುವುದಿಲ್ಲವಾದ್ದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಅನರ್ಹರಾಗಿರುತ್ತಾರೆ. ಆದ್ದರಿಂದ ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಲ್-2 ಗುತ್ತಿಗೆದಾರರು ಸಲ್ಲಿಸಿರುವ ದೃಢೀಕರಣ ಪತ್ರಗಳನ್ವಯ ಅರ್ಹರಾಗಿದ್ದು, ಎಲ್-1 ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಎಲ್-2 ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸಲು ಅಂದರೆ ರೂ. 12,98,851.52 (ಶೇ. +3.02%) ಗಳಿಗೆ ಒಪ್ಪಿರುವ ದರ ಸಂಧಾನ ಪತ್ರವನ್ನು ಲಗತ್ತಿಸಿ ಎಲ್-2 ಗುತ್ತಿಗೆದಾರರ ಟೆಂಡರ್ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ರಾಜರಾಜೇಶ್ವರಿನಗರ ವಿಭಾಗ

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ)

TA
Pl. keep up
pmlup.

ವಿಷಯ : ಟೆಂಡರ್ ಅನುಮೋದನೆ ಕೋರಿಸಲ್ಲಿಸುವ ಬಗ್ಗೆ.

ಪುಟದ ಸಂಖ್ಯೆ ..... - 17 -

ಕಡತದ ಸಂಖ್ಯೆ ..... CE/RRN/Pol 12/22

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (49) ರಲ್ಲಿ ಮುಖ್ಯ ಅಭಿಯಂತರರು ಕೋರಿರುವ ಅಂಶಗಳಿಗೆ ಕಂಡಿಕೆ (50) ರಿಂ (51) ರಲ್ಲಿ ಕಾ.ಪಾ.ಅ(ರಾರಾನಗರ) ವಿಭಾಗ ರವರು ಸಲ್ಲಿಸಿರುವ ಸ್ಪಷ್ಟೀಕರಣ ವರದಿಯಯನ್ನು ತಮ್ಮ ಅವಗಾಹನೆಗೆ ತರುತ್ತಾ, ಕೆಳಕಂಡ ಕಾಮಗಾರಿಯು ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ರಸ್ತೆ ಕಾಮಗಾರಿಯಾಗಿದ್ದು, ದಿನನಿತ್ಯ ದಟ್ಟವಾದ ವಾಹನ ಸಂಚಾರದಿಂದ ಕೂಡಿರುತ್ತದೆ. ಹಾಗಾಗಿ ಸದರಿ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು ಅವಶ್ಯಕವಾಗಿರುತ್ತದೆ. 2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಲೆಕ್ಕಶೀರ್ಷಿಕೆ P-3296ರ ಅನುದಾನಡಿ ಅನುನೋದನೆಗೊಂಡಿರುವ ಕಾಮಗಾರಿಯಾದ **"Maintenance of Roads and footpath in J.P.Park in ward No.17"(017-20-000028)** ರ ಕಾಮಗಾರಿಯ ಅಂದಾಜು ಮೊತ್ತ ರೂ.15.00 ಲಕ್ಷಗಳ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ಎಲ್–2 ಗುತ್ತಿಗೆದಾರರಾಗಿ ಹೊರಹುಮ್ಮಿರುವ **Sri.S Santhosh Kumar** ರವರು ಎಲ್–1 ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ಅಂದರೆ ರೂ.12,98,851.52 ಕ್ಕೆ ಕಾಮಗಾರಿ ನಿರ್ವಹಿಸಲು ಒಪ್ಪಿ ದರ ಸಂಧಾನ ಪತ್ರ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸದರಿ ಗುತ್ತಿಗೆದಾರರಿಗೆ ಟೆಂಡರ್ ಅನುಮೋದನೆ ನೀಡಲು ಕಾ.ಪಾ.ಅ(ರಾರಾನಗರ) ವಿಭಾಗ ರವರು ಶಿಫಾರಸ್ಸು ಮಾಡಿರುವುದನ್ನು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

53

54

ಮುಖ್ಯ ಅಭಿಯಂತರರು(ರಾರಾನವ)

Power 53 is approved by the Lower level

ಮುಖ್ಯ ಅಭಿಯಂತರರು.
ರಾಜರಾಜೇಶ್ವರಿ ನಗರ ವಲಯ
ಬೆಂಗಳೂರು ಮಹಾನಗರ ಪಾಲಿಕೆ

55

ಟಿಪ್ಪಣಿ ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ವಿಷಯ .....

.....

ಟಿಪ್ಪಣಿಗಳು ಮತ್ತು ಆಜ್ಞೆಗಳು

ಪಂಕ್ತಿಯ ಸಂಖ್ಯೆ	

ಸದರಿ ಕಾಮಗಾರಿಗೆ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರಿಂದ ಟೆಂಡರ್ ಅನುಮೋದನೆ ದೊರೆತಿದ್ದು, ಕೆ.ಡಬ್ಲ್ಯೂ.ಸೆಕ್ಷನ್ ರಂತೆ ಭದ್ರತಾ ಠೇವಣಿ ರೂ. 38,966/- ಗಳನ್ನು ನೀಡಲು ಗುತ್ತಿಗೆದಾರರಿಗೆ ಎಲ್.ಓ.ಎ ಅನ್ನು ತಯಾರಿಸಿ, ತಮ್ಮ ಸಹಿಗಾಗಿ ಮಂಡಿಸಿದೆ.

ಕಾ.ಪಾ.ಅ.
ರಾ.ರಾ.ನ.ವಿ)

ಗುತ್ತಿಗೆದಾರರು ದಿನಾಂಕ: . .2021 ರಂದು ವಿಭಾಗ ಕಛೇರಿಗೆ ಪತ್ರವನ್ನು ನೀಡಿ, ತಮ್ಮ ಪತ್ರದಲ್ಲಿ ಭದ್ರತಾ ಠೇವಣಿ ರೂ. 38,966/- ಗಳನ್ನು ಬ್ಯಾಂಕ್ ಗ್ಯಾರಂಟಿ ಅಥವಾ ಡಿ.ಡಿ.ಯನ್ನು ನೀಡಿ ಗುತ್ತಿಗೆ ಕರಾರು ಮತ್ತು ಕಾರ್ಯಾದೇಶ ಪತ್ರ ಪಡೆಯಲು ಸೂಚಿಸಿರುತ್ತೀರಿ. ಆದರೆ ನಾನು ಬಿ.ಬಿ.ಎಂ.ಪಿ ಯಲ್ಲಿ ಹಲವಾರು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಬಿ.ಬಿ.ಎಂ.ಪಿ ಯಿಂದ ಹಣ ಬಿಡುಗಡೆಯಾಗಿರುವುದಿಲ್ಲ ಹಾಗೂ ಹಣದ ಮುಗ್ಗಟ್ಟು ಇರುವುದರಿಂದ ಬ್ಯಾಂಕ್ ಗ್ಯಾರಂಟಿಯನ್ನು ನೀಡುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ ಈ ಕಾಮಗಾರಿಯ ಮೊದಲನೇ ಹಾಗೂ ಭಾಗಶಃ ಬಿಲ್ಲಿನಲ್ಲಿ ಭದ್ರತಾ ಠೇವಣಿಯನ್ನು ಕಟಾವು ಮಾಡಿಕೊಂಡು ಕಾರ್ಯಾದೇಶವನ್ನು ನೀಡಲು ಕೋರಿರುತ್ತಾರೆ. ಅದರಂತೆ ಸದರಿಯವರಿಗೆ ಕರಾರುಪತ್ರ ಮಾಡಿಕೊಂಡು ಕಾರ್ಯಾದೇಶ ನೀಡಲು ತಮ್ಮ ಆದೇಶಕ್ಕಾಗಿ ಸಲ್ಲಿಸಿದೆ.

ಕಾ.ಪಾ.ಅ.
ರಾ.ರಾ.ನ.ವಿ)

ಸದರಿ ಕಾಮಗಾರಿಗೆ ಗುತ್ತಿಗೆ ಕರಾರು ಮಾಡಿಕೊಳ್ಳಲು ಕರಾರು ಪತ್ರವನ್ನು ತಯಾರಿಸಿ ತಮ್ಮ ಸಹಿಗಾಗಿ ಮಂಡಿಸಿದೆ.

ಕಾ.ಪಾ.ಅ.
ರಾ.ರಾ.ನ.ವಿ)

ಸದರಿ ಕಾಮಗಾರಿಗೆ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಮುಂದಿನ ಕ್ರಮವಾಗಿ ಕೆಲಸದ ಆದೇಶ ಪತ್ರವನ್ನು ತಯಾರಿಸಿ ತಮ್ಮ ಸಹಿಗಾಗಿ ಮಂಡಿಸಿದೆ.

ಕಾ.ಪಾ.ಅ.
ರಾ.ರಾ.ನ.ವಿ)